# ಜಾನಪದ ಸಾಹಿತ್ಯ ಮತ್ತು ಸ್ತ್ರೀ ಚಿಂತನೆ

**ಸುನೈನಾ ಎಂ.ಎಂ.**

ಕನ್ನಡ ಉಪನ್ಯಾಸಕಿ, ಪಿ.ಸಿ. ಜಾಬಿನ್ ವಿಜ್ಞಾನ, ಮಹಾವಿದ್ಯಾಲಯ(ಬಿ.ಸಿ.ಎ), ಹುಬ್ಬಳ್ಳಿ.

DOI: https://doi.org/10.5281/zenodo.17258029

## ABSTRACT:

ಜಾನಪದ ಸಾಹಿತ್ಯವು ಜನರ ಬದುಕಿನ ಪ್ರತಿಫಲನವಾಗಿದ್ದು, ಜನಜೀವನದ ಒಡನಾಟ, ನಂಬಿಕೆ, ಆಚರಣೆ, ಸಂಸ್ಕೃತಿ ಹಾಗೂ ಜೀವನ ಮೌಲ್ಯಗಳನ್ನು ಒಳಗೊಂಡಿದೆ. ಮೌಖಿಕ ಪರಂಪರೆಯಿಂದ ಹರಿದಾಡಿದ ಈ ಸಾಹಿತ್ಯದಲ್ಲಿ ತಾಯಿ, ತವರು, ಪ್ರೀತಿ, ಧರ್ಮ, ಪ್ರಕೃತಿ, ದುಡಿಮೆ, ಸಹಬಾಳ್ವೆ, ಕುಟುಂಬ, ಆಚಾರ–ವಿಚಾರ, ನೀತಿ–ನಡತೆ ಮುಂತಾದ ಅಂಶಗಳು ಪ್ರತಿಬಿಂಬಿತವಾಗಿವೆ. ವಿಶೇಷವಾಗಿ ಮಹಿಳೆಯರ ಕೊಡುಗೆ ಜನಪದ ಸಾಹಿತ್ಯದಲ್ಲಿ ಅನನ್ಯವಾಗಿದ್ದು, ತ್ರಿಪದಿ, ಗರತಿಯ ಹಾಡು, ಭಜನೆ ಮುಂತಾದ ರೂಪಗಳಲ್ಲಿ ಅವರು ತಮ್ಮ ಜೀವನಾನುಭವವನ್ನು ಕಾವ್ಯಗೊಳಿಸಿದ್ದಾರೆ. ವಿದೇಶಿ ವಿದ್ವಾಂಸರು ಈ ಸಾಹಿತ್ಯದ ಮಹತ್ವವನ್ನು ಅರಿತು ಸಂಗ್ರಹಿಸಿದಾಗ, ದೇಶೀಯ ವಿದ್ವಾಂಸರು ಅದಕ್ಕೆ ಮೌಲ್ಯ ನೀಡಿದರು. ಆಧುನಿಕ ತಂತ್ರಜ್ಞಾನ ಮತ್ತು ಜಾಗತೀಕರಣದಿಂದ ಜನಪದ ಕಲೆ ಕುಗ್ಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ, ಅದನ್ನು ಉಳಿಸಿ ಬೆಳೆಸುವುದು ಸಮಾಜದ ಹೊಣೆಗಾರಿಕೆ. ಹೀಗೆ ಜನಪದ ಸಾಹಿತ್ಯವು ಕನ್ನಡ ಸಂಸ್ಕೃತಿಯ ಶ್ರೀಮಂತ ಪರಂಪರೆ, ಜೀವನದ ದರ್ಶನ ಮತ್ತು ಮುಂದಿನ ಪೀಳಿಗೆಗೆ ಮಾರ್ಗದರ್ಶನ ನೀಡುವ ಶಾಶ್ವತ ಸಂಪತ್ತು.

## KEYWORDS:

ಜಾನಪದ ಸಾಹಿತ್ಯ, ಜನಜೀವನ, ತಾಯಿ, ತ್ರಿಪದಿ, ಗರತಿಯ ಹಾಡು, ಮೌಖಿಕ ಪರಂಪರೆ.

ಜಾನಪದ ಎಂಬ ಪರಿಕಲ್ಪನೆ ಜನರ ಒಡನಾಟದ ಜನಜೀವನವಾಗಿದೆ. ನಮ್ಮ ನಿತ್ಯ ಜೀವನದೊಂದಿಗೆ ಸಮಷ್ಟಿ ಆಚರಣೆಯನ್ನು ಕಟ್ಟಿ ಕೊಡುವ ವ್ಯವಸ್ಥೆಯೇ ಜಾನಪದ. ಸಮಾಜದ ಜನರ ಉತ್ಪತ್ತಿ ಹಂಚಿಕೆ, ಅನುಭೋಗ, ಆಹಾರ, ಉಡುಪು, ವಸತಿ, ಆರ್ಥಿಕ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕವಾಗಿ ಗುರುತಿಸಿಕೊಳ್ಳುತ್ತಿದೆ. ಜನಪದ ಎಂಬ ಪದ ಅನಾದಿಕಾಲದಿಂದ ಬಳಕೆಯಲ್ಲಿದೆ. ಜನಪದ ಎನ್ನುವುದೇ ಸಮುದಾಯ, ಜನಸಮೂಹದ ಒಡನಾಟವೆಂದು ಗುರುತಿಸಿ ಕೊಳ್ಳುತ್ತದೆ. "ಜನವಾಣಿ

ಬೇರು ಕವಿ ವಾಣಿ ಹೂ'' ಎಂಬ ಮಾತು ಜಾನಪದ ಭಾಷೆಯ ಗಟ್ಟಿತನವನ್ನು ಎತ್ತಿ ತೋರಿಸುತ್ತದೆ.

''ಕುರಿತೋದಯಂ ಕಾವ್ಯಪ್ರಯೋಗ ಪರಿಣತ ಮತಿಗಳಿಂದ'' ರಚಿತವಾದ ಜಾನಪದವು ನಮ್ಮ ಪ್ರಾಚೀನ ಜನತೆ ಕಾವ್ಯ ರಚಿಸಿದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಆಧುನಿಕ ಬದುಕಿಗೆ ಪ್ರೇರಣೆಯನ್ನು ಕಲ್ಪಿಸುತ್ತದೆ. ಸಮಾಜ ಸಮ್ಮತಿಸಿದ ಕಲಿಕೆಗಳೆಲ್ಲಾ ನಡವಳಿಕೆಗಳು ಸಂಸ್ಕೃತಿಯ ಅಂಗವೆಂದು ಪರಿಗಣಿಸುವುದರಿಂದ ಜಾನಪದವು ಸಾಮಾನ್ಯ ಮನಸ್ಸುಗಳ ಸಂಸ್ಕೃತಿಯ ಅಂಗವೆಂದು ಸ್ಪಷ್ಟಪಡಿಸಬಹುದು. ಶ್ರಮ ಜೀವಿಗಳಾದ ಜನಪದರು ತಮ್ಮ ಆಯಾಸ ಪರಿಹಾರಕ್ಕೋಸ್ಕರ ಅನುಭವ ಮುಕ್ತವಾದ ಜಾನಪದ ಹಾಡುಗಳನ್ನು ರಚಿಸಿದರು. ಗ್ರಾಮ್ಯ ಸಮಾಜದ ಕಷ್ಟ ನೋವುಗಳಿಗೆ ಸ್ಪಂದಿಸಿ ನೀತಿಯನ್ನು ಉಪದೇಶಿಸಿದರು. ಮೌಖಿಕತೆಯೇ ಇವರ ಶುದ್ಧ ಸಾತ್ವಿಕ ಶಕ್ತಿ. ಆದ್ದರಿಂದ ಜಾನಪದವನ್ನು ಬಾಯಿಂದ ಬಾಯಿಗೆ ಹರಿದಾಡಿದ ಕಂಠಸ್ಥ ಸಾಹಿತ್ಯ ಎಂಬ ಪದ ಬಳಕೆಯೂ ಇದೆ.

ಕವಿರಾಜಮಾರ್ಗ ಕಾರರು ಹೇಳುವಂತೆ '' ಕಾವೇರಿಯಿಂದ ಗೋದಾವರಿ ವರಮಿರ್ದನಾಡಾವರ್ಗಳ್'' ಎಂಬ ಹೇಳಿಕೆಯಲ್ಲಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಮಾಡುವ ಜನರೇ ಜನಪದರು. ಇಂಥಹ ಜನ ಸಂಸ್ಕೃತಿಯ ಅನುಸಂಧಾನಗಳು ಮರು ರೂಪ ಪಡೆದವುಗಳಾಗಿವೆ. ಮನುಷ್ಯ ಬದುಕು ಹೇಗಿರಬೇಕು ಎಂಬ ನಿದರ್ಶನಗಳನ್ನು ತಮ್ಮ ಅನುಭವದ ನುಡಿಗಳಲ್ಲಿ ಕಟ್ಟಿಕೊಟ್ಟವರು ಜನಪದರು. ಬದುಕಿನ ರೀತಿ, ನೀತಿ, ನಡವಳಿಕೆ, ಆದರ್ಶ ಪಾಲನೆ, ಮೌಲ್ಯಗಳನ್ನು ಅಳವಡಿಸಿಕೊಳ್ಳುವಿಕೆ ಹೀಗೆ ಬದುಕಿಗೆ ಬೇಕಾದ ಪಾಠಗಳನ್ನು ಜನಪದರು ಜನಪದ ಸಾಹಿತ್ಯ ಕಟ್ಟುವ ಮೂಲಕ ತಿಳಿಯಪಡಿಸಿದ್ದಾರೆ. ವ್ಯಕ್ತಿತ್ವ ವಿಕಸನದಂತಹ ಶಿಬಿರಗಳಿಗೆ ಹೋಗುವ ಇಂದಿನ ವರ್ತಮಾನದಲ್ಲಿ ಬಹು ಹಿಂದೆಯೇ ಜನಪದರು ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಅಂಶಗಳನ್ನು ಜನಪದ ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದ್ದಾರೆ. ನಮ್ಮ ನಡೆ, ನುಡಿ, ಊಟ ಉಪಚಾರ, ಆಚಾರ, ವಿಚಾರ, ನಡೆಯುವ, ನೋಡುವ, ಮಾತನಾಡುವ ಕ್ರಿಯೆಗಳ ಬಗೆಗೆ ತಮ್ಮದೇ ಅನುಭವವನ್ನು ವ್ಯಕ್ತಿತ್ವ ವಿಕಸನದ ಅಮೃತವನ್ನು ಕಟ್ಟಿಕೊಟ್ಟಿದ್ದಾರೆ.

ಮಾನವನ ಬದುಕಿನ ಪ್ರತಿಫಲನ ಜಾನಪದ ಸಾಹಿತ್ಯ. ಇದು ನಮ್ಮ ಜೀವನದ ರಸಾನುಭವಗಳ ಗನ್ನಿಯಾಗಿದ್ದು, ಇದರ ಮಹತ್ವ ನಮಗರಿವಿಲ್ಲದೇ ಹೋದಾಗ ವಿದೇಶಿ ವಿದ್ವಾಂಸರು ಅರಿವಾಗಿಸಿದ್ದು ವಿಶೇಷವಾಗಿದೆ. ವ್ಯಾಪಾರದಂತಹ ಬೇರೆ ಬೇರೆ ಉದ್ದೇಶಗಳಿಂದ ಭಾರತಕ್ಕೆ ಬಂದ ವಿದೇಶಿ ಯಾತ್ರಿಕರು, ವಿದ್ವಾಂಸರು, ತಜ್ಞರು, ಮಿಶನರಿಗಳು ಇಲ್ಲಿರುವ ಹೇರಳ ಜಾನಪದ ಸಾಹಿತ್ಯ ಹಾಗೂ ಇದರ ಮಹತ್ವವನ್ನು

ಅರಿತು ಅಧ್ಯಯನ ಸಂಗ್ರಹಕ್ಕೆ ಮುಂದಾದರು. ಈ ಕಾರ್ಯ 18 ನೇ ಶತಮಾನದಲ್ಲಿ ಪ್ರಾರಂಭವಾಯಿತು. ಪಾಶ್ಚಾತ್ಯ ವಿದ್ವಾಂಸರಲ್ಲಿ ಪ್ರಮುಖವಾಗಿ ಅಬ್ಬೆಡು ವಾಯ್, ರೆವರೆಂಡ್ ಕಿಟಲ್, ಮೆರಿಫ್ರೆರಿ, ವೆಕೆಂಜಿ, ಚಾರ್ಲ್ಸ್ ಇಗೋವರ್ ಮುಂತಾದವರು ಜಾನಪದದ ವಿವಿಧ ಮಗ್ಗಲುಗಳನ್ನು ಅರಿತರಲ್ಲದೆ ಅನೇಕ ಗೀತೆಗಳನ್ನು, ಹಾಡುಗಳನ್ನು ಸಂಗ್ರಹಿಸಿ, ಮುದ್ರಿಸಿ ಭಾರತೀಯರಿಗೆ ನೀಡಿದ್ದಾರೆ. ನಾಡಿನ ತುಂಬೆಲ್ಲ ಈ ಪಾಶ್ಚಾತ್ಯರು ಸಂಚರಿಸಿ ಇಲ್ಲಿಯ ಸಾಹಿತ್ಯದ ಸತ್ವವನ್ನು ಸ್ವತಃ ಅಭ್ಯಾಸಿಸಿ ಅನೇಕ ಗ್ರಂಥಗಳ ರೂಪದಲ್ಲಿ ಹೊರತಂದಾಗ ಭಾರತೀಯರಾದ ನಾವು ಆಗ ಎಚ್ಚೆತ್ತೆವು.

ವಿದೇಶಿ ವಿದ್ವಾಂಸರು ಎಚ್ಚರಿಸಿದಾಗ, ನಮ್ಮ ದೇಶೀಯ ವಿದ್ವಾಂಸರು, ಸಾಹಿತಿಗಳು, ಕನ್ನಡ ವಿದ್ವಾಂಸರು ಈ ಜನಪದ ಸಾಹಿತ್ಯದ ಕಡೆಗೆ, ಇದರ ಅಧ್ಯಯನದಡೆಗೆ ಒಮ್ಮೆಲೆ ಆಸಕ್ತಿ ಮೂಡದೆ ಅಭ್ಯಸಿಸಲು ಕೂಡ ಮುಂದೆ ಬರಲಿಲ್ಲ. ಇದರಿಂದ 19ನೇ ಶತಮಾನದಲ್ಲಿ ಜಾನಪದ ಅಧ್ಯಯನ ಹಾಗೂ ಸಂಗ್ರಹ ಕಾರ್ಯ ನಡೆಯದೇ, ಜಾನಪದ ಸಾಹಿತ್ಯ ಅಧ್ಯಯನ ಕಾರ್ಯ ಮಂದಗತಿಯಲ್ಲಿ ನಡೆಯಿತೆನ್ನಬಹುದು. ಮುಂದೆ ದಶಕಗಳಲ್ಲಿ ಶ್ರೀಕಂಠೇಗೌಡರಂತಹವರು ಈ ಜನಪದ ಸಾಹಿತ್ಯದ ಅಧ್ಯಯನ ಮಾಡಲು, ಸಂಗ್ರಹಿಸಲು ಮುಂದೆ ಬಂದರು. ಆಗ ಇವರು ಮೊದಲು ಜನಪದ ಕಥೆ, ಗಾದೆ, ಭಾಷೆ ಹಾಗೂ ಜೀವನದ ಅನೇಕ ಪ್ರಕಾರಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡಿ ಮಹದುಪಕಾರ ಮಾಡಿದ್ದಾರೆ. ಅಲ್ಲದೆ ಕರ್ನಾಟಕದ ಜಾನಪದ ಜೀವನದ ವಿವಿಧ ಮುಖಗಳತ್ತ ತಮ್ಮ ಕೈಯಾಡಿಸಿ ಸಾಹಿತ್ಯದ ಉಳಿವಿಗೆ ತಮ್ಮದೇ ಆದ ಸೇವೆ ಸಲ್ಲಿಸಿದ್ದಾರೆ. ಜಾನಪದ ಪರಿಕಲ್ಪನೆಯೇ ಇಲ್ಲದಂತಹ ಸಂದರ್ಭದಲ್ಲಿ ಕರ್ನಾಟಕ ಜಾನಪದ ಅಧ್ಯಯನ ಇತಿಹಾಸದಲ್ಲೇ ಇದನ್ನು ಮಹತ್ವದ ಗ್ರಂಥವೆನ್ನಬಹುದು.

ಇತಿಹಾಸದಲೇ ಪೆಚ್ಚೋಳೆ ಪಳಮೆ ಎಂಬುವುದು 1924ರಲ್ಲಿ ಹೊರಬಂದಿದ್ದು, ಇದು ಕೊಡಗಿನ, ಕೊಡವರ ಜೀವನ ಮತ್ತು ಸಂಸ್ಕೃತಿವನ್ನೊಳಗೊಂಡ ಮಹತ್ವದ ಗ್ರಂಥವಾಗಿದೆ. ನಂತರ ಕನ್ನಡದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಹಲಸಂಗಿ ಗೆಳೆಯರು, ಬಿ.ಎಂ.ಶ್ರೀ ಮುಂತಾದವರು ಬರೆದ ಬರಹಗಳು ಮತ್ತು ಸಾಹಿತ್ಯ ಸಂಕಲನಗಳು ಕನ್ನಡ ಜಾನಪದ ಸಾಹಿತ್ಯದ ಸತ್ವಸಂಪನ್ನತೆಯನ್ನು ವಿದ್ವತ್ ಲೋಕಕ್ಕೆ ಪರಿಚಯಿಸಿದವು.

**ಜನಪದ ಸಾಹಿತ್ಯದಲ್ಲಿ ತಾಯಿ:**

'ಹೆಣ್ಣಿನಿಂದಲೇ ಜನಪದ ಗೀತೆ, ಸಂಸ್ಕೃತಿ ಹುಟ್ಟಿದ್ದು, ಜನಪದ ಸಾಹಿತ್ಯಕ್ಕೆ ಸ್ತ್ರೀಯರ ಕೊಡುಗೆ ಅನನ್ಯವಾದುದು'. ಕುಟುಂಬದ ಆಚಾರ ವಿಚಾರ, ಸುಖ,ದುಃಖ, ಗಂಡ ಹೆಂಡತಿಯ ಜಗಳ ಜನಪದ ಸಾಹಿತ್ಯದಲ್ಲಿ ಸೊಗಸಾಗಿ ಮೂಡಿವೆ. ಸಾಮಾಜಿಕ

ಜೀವನದ ಒಂದು ಮಗ್ಗುಲನ್ನೇ ಪರಿಚಯಿಸುವಂತಹ ತ್ರಿಪದಿಗಳಿವೆ. ಸ್ತ್ರೀಯರ ಮನೋಧರ್ಮ ಗುರುತಿಸುವ ಹಾಡುಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿವೆ. ಪಿತೃಪ್ರಧಾನ ಸಮಾಜದಲ್ಲಿ ಹೆಣ್ಣು ತಾನು ಹುಟ್ಟಿ ಬೆಳೆದ ಮನೆ ತೊರೆದು ಅಪರಿಚಿತ ಪರಿಸರದ ಜನರ ಮಧ್ಯದಲ್ಲಿ ಬದುಕು ರೂಪಿಸಿಕೊಳ್ಳುತ್ತಾಳೆ. ಕುಟುಂಬ ಕಟ್ಟುತ್ತಾಳೆ. ಇದಕ್ಕೆ ಅವಳ ತವರೂರಿನ ಅನುಭವಗಳು ಮಾರ್ಗದರ್ಶನ ನೀಡುತ್ತವೆ. ಜನಪದ ಗೀತೆಗಳಲ್ಲಿ ಧಾರ್ಮಿಕ ವಿಚಾರಗಳು ಅಡಕವಾಗಿವೆ. ಜತೆಗೆ ದೇವರು, ಪ್ರಕೃತಿ, ಮದುವೆ, ಹಾಸ್ಯ, ಸರಸ, ಪ್ರೇಮ, ಚೇಷ್ಟೆ, ಚೆಲ್ಲಾಟ, ಮಳೆ, ಆಚಾರ, ಸಂಪ್ರದಾಯ ಕುರಿತಂತೆ ಹಾಡುಗಳನ್ನು ಕಟ್ಟಲಾಗಿದೆ. ದೇಸಿ ಜನಪದರು ವಿಶ್ವ ಜಾನಪದಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ.

ಜಾನಪದ ಸಂಸ್ಕೃತಿಯ ಒಡಲಿನ ಸೂಕ್ಷ್ಮಗಳು ನಮ್ಮನ್ನು ಸದಾ ಎಚ್ಚರಿಸುತ್ತವೆ. ಜನಪರವಾದ ನೋವು ನಲಿವುಗಳು, ಸೋಲು ಗೆಲುವು, ಎತ್ತರ ಬಿತ್ತರ, ಕಷ್ಟ ಕಾರ್ಪಣ್ಯ ಈ ಎಲ್ಲಾ ಭಾವನೆಗಳು ಅನುಭವದಲ್ಲಿ ಬೆಂದು ಪರಿ ಶುದ್ಧವಾಗಿ ಸಮೂಹಕ್ಕೆ ಅನುಗುಣವಾಗಿ ಬೆಳೆದವು. ಅವೇ ಹಾಡು, ಹಸೆ, ಕಥೆ, ಕುಣಿತ, ಗಾದೆ, ಒಗಟು ...... ಇವೆಲ್ಲಾ ಗ್ರಾಮ್ಯ ಸಂಸ್ಕೃತಿಯ ಸಂಕಥನಗಳಾಗಿವೆ. ಜಾನಪದರ ಸಾರ್ವಕಾಲಿಕ ಎಚ್ಚರಿಸುವ ವಿಶ್ವಕೋಶವೇ ಆಗಿದೆ. "ಸಾಧುಗೆ ಸಾಧು, ಮಾಧುರ್ಯಂಗೆ ಮಾದುರ್ಯಂ// ಬಾದಿಪ್ಪ ಕಲಿಗೆ ಕಲಿಯುಗ ವಿಪರೀತನ"// ಮಾಧವ ನೀತನ್ ಪೆರನಲ್ಲ //

ಕಪ್ಪೆ ಅರಭಟ್ಟರ ಶಾಸನದಲ್ಲಿ .... ಕಪ್ಪೆ ಅರಭಟ್ಟರು ಜನಾನುರಾಗಿಯಾಗಿ ಜನರ ಕಷ್ಟ ಕಾಲದಲ್ಲಿ ನೆರವಾಗುತ್ತಿದ್ದನು. ಆಪತ್ ಬಾಂಧವನಂತಿದ್ದ ಈತ ಒಳ್ಳೆಯವರಿಗೆ ಒಳ್ಳೆಯವನಾಗಿ ಆತ್ಮೀಯರಿಗೆ ಪ್ರೀತಿ ಪಾತ್ರದವನಾಗಿ ತೊಂದರೆ ಕೊಡುವವರಿಗೆ ಸಿಂಹಸ್ವಪ್ನನಾಗಿದ್ದನು. ಮಹಾಭಾರತದಲ್ಲಿ ಕೃಷ್ಣ ಹೇಗೆ ದುಷ್ಟರ ಶಿಕ್ಷೆ, ಶಿಷ್ಟರ ರಕ್ಷೆ ಮಾಡಿದ್ದನೊ ಅದೇ ರೀತಿಯಲ್ಲಿ ಇದ್ದನು ಎಂದು ಒಬ್ಬ ಜನಪದ ಅನಕ್ಷರಸ್ಥ ತಾಯಿ ತನ್ನ ಮಗುವಿಗೆ ನೀತಿಯ ಅಂತಃಸ್ಸತ್ವವನ್ನು ಉಪದೇಶಿಸುತ್ತಾಳೆ. ದೈವತ್ವದಲ್ಲಿ ಬದುಕನ್ನು ಕಾಣುವ ಜನಪದ ಸ್ತ್ರೀಯರು ತ್ರಿಪದಿಯನ್ನೇ ಆಯ್ಕೆ ಮಾಡಿಕೊಂಡರು. ತ್ರಿಪದಿ ಹಾಡು, ಮಟ್ಟಿನ ಛಂದಸ್ಸಾಗಿದೆ. ಜನಪದ ಪದ್ಯಗಳಿಗೆ ಲಯ ಮತ್ತು ನಾದಗಳಿಗೆ ಮುಕ್ತತೆಯನ್ನು ಕೊಡುತ್ತದೆ. ಬೇಂದ್ರೆಯವರು ತ್ರಿಪದಿಯೇ ಕನ್ನಡ ವೃತ್ತಗಳ ಗಾಯತ್ರಿ ಎಂದಿದ್ದಾರೆ. ಗರತಿಯ ಹಾಡಿನ ರಸ ಋಷಿಯೇ ಜಾನಪದ.

ನಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ನಮ್ಮ ತಾಯಿ, ತಂಗಿಯರು, ಅಕ್ಕಂದಿರು ಜನಪದ ಹಾಡುಗಳ ಮೂಲಕ ಜೀವ ತುಂಬಿದರು. ಹೀಗಾಗಿ ಜನಪದ

ಮಹಿಳೆಯರದೇ ನಿಜವಾದ ಕಾವ್ಯ. ಉಳಿದದ್ದು ಕಾವ್ಯದ ಪ್ರತಿರೂಪ. ಕಾವ್ಯವನ್ನು ಕಾಂತಾಸಂಮಿತಿಯನ್ನಾಗಿ ಕಾಣುವಾಗ ಹೆಂಡತಿ ಎಂಬ ಅರ್ಥದಲ್ಲಿ ಅಲ್ಲ. ಕಾಂತೆಯಲ್ಲ. ಸ್ತ್ರೀಯನ್ನು ಸಮೀಕರಿಸಿ ತಿಳಿಯಬೇಕು. ಮೊದಲನೆಯದಾಗಿ ತನ್ನ ಮಗುವನ್ನು ಸರ್ವಸ್ವವೆಂದು ತಿಳಿದು ಹೇಳುವ ಆ ಮಮತಾಮಯಿ ತಾಯಿ......

**ಆಡಿ ಬಾ ಎನ ಕಂದ// ಅಂಗಾಲ ತೊಳೆದೇನು**
**ತೆಂಗಿನ ಕಾಯಿ ತಿಳಿನೀರ // ತಕ್ಕೊಂಡು**
**ಬಂಗಾರ ಮಾರಿಯ // ತೊಳೆದೇನು.**

ತಾಯಿಯ ಪ್ರೀತಿ ಮಮತೆಗೆ ಜನಪದರ ಹೋಲಿಕೆಯ ರೂಪಕಗಳು ಪ್ರೀತಿಯ ವಾಸ್ತವತೆಯನ್ನು ಸ್ಪಷ್ಟ ಪಡಿಸುತ್ತವೆ. ಮಗುವಿನ ಆಟ ಪಾಠಗಳಲ್ಲಿ ಪ್ರೀತಿಯ ಮಾರ್ಗದರ್ಶಕಳು ಆಕೆ. ಮಗುವಿನ ಮುಖ ತೊಳೆಯಲು ಸಾಮಾನ್ಯ ನೀರಿನ ಕಲ್ಪನೆ ಕೊಡುವುದಿಲ್ಲ. ತೆಂಗಿನ ಕಾಯಿ ಎಳೆ ನೀರು ಬೇಕೆಂದು ಹೇಳುವ ಆಕೆ ಅಮೂಲ್ಯವಾದದ್ದು ಬೆಲೆಯುಳ್ಳದ್ದು ಮಾತ್ರ ತನ್ನ ಮಗುವಿಗೆ ಬೇಕೆನ್ನುವಳು.

**ಪುಟ್ಟರಾಮಿ ಅಟ್ಟಮೇಲೊಂದ್ ಬತ್ತು**
**ಬೆಲ್ಲಕ್ ಬತ್ತು ಚೂಜಿ ಗಾತ್ರದ ಸುಂಡೋ**
**ಚೂಜಿಗಾತ್ರದ ಸುಂಡನಗ್ ಬತ್ತು**
**ಮೆಡ್ಗಣ್ಣ ಕೊತ್ತಿ**
**ಮೆಡ್ಗಣ್ಣ ಕೊತ್ತಿಗೆ ಬತ್ತು**
**ಡೊಂಕಬಾಲದ ನಾಯಿ**
**ಡೊಂಕಬಾಲದ ನಾಯಿಗೆ ಬತ್ತು**
**ಮೂಲೇಲಿರುವ ದೊಣ್ಣೆ**
**ಮೂಲೇಲಿರುವ ದೊಣ್ಣೆಗೆ ಬತ್ತು**
**ಅಗ್ನಿದೇವತಿ ಕೊಂಡ**
**ಅಗ್ನಿದೇವತಿ ಕೊಂಡಕೆ ಬತ್ತು**
**ನೂರೊಂದು ಹರವಿ ನೀರು**
**ನೂರೊಂದು ಹರವಿ ನೀರಿಗೆ ಬತ್ತು**
**ಜಂಗರಗೊಂಬಿನ ಎಮ್ಮೆ**

ಇಲ್ಲಿ ಪ್ರಾಸಪ್ರಿಯತೆಯೇ ಹೆಚ್ಚಾಗಿದ್ದು ಅರ್ಥ ಕಡಿಮೆ. ಆದ್ದರಿಂದ ಈ ಪದ್ಯಗಳನ್ನು 'ಶಿಶು ಪ್ರಾಸಗಳೆಂದು ಕರೆಯಲಾಗಿದೆ. ವಸ್ತು ಮತ್ತು ರಚನೆಗಳ ದೃಷ್ಟಿಯಿಂದಲೂ ಕೂಡ ಈ ಪ್ರಾಸಗಳು ಒಂದೇ ರೀತಿ; ಹಾಗೂ ನಾದಗಳನ್ನು ಹೊಂದಿರುತ್ತವೆ.

**ಏಳುತಲೆ ಎದ್ದು ಯಾರಾರ ನೆನೆದೇವಿ**
**ಎಳ್ಳು ಜೀರಿಗೆ ಬೆಳೆಯೋಳ/ ಭೂಮಿತಾಯ**

**ನಾವೆಲ್ಲಾಕೆ ಮೊದಲು ನೆನೆದೇವೆ**

ಜನಪದ ಬದುಕಿನಲ್ಲಿ ತಮಗೆ ನಿತ್ಯವೂ ನೆರವಾಗುವುದರ ಬಗ್ಗೆ ಇರುವ ಕೃತಜ್ಞತೆಯ ಭಾವವು ದೈವತ್ವವನ್ನು ಕಾಣುತ್ತದೆ. ನಮ್ಮನ್ನು ಹೊತ್ತಿರುವ, ಆಹಾರವನ್ನು ಒದಗಿಸುವ, ಕೊನೆಗೆ ತನ್ನಲ್ಲೇ ಸೇರಿಸಿಕೊಳ್ಳುವ ಭೂಮಿಯನ್ನು ತಾಯಿ ಎಂದೇ ಇಲ್ಲಿ ತುಂಬು ಕೃತಜ್ಞತಾ ಭಾವದಿಂದ ಕರೆಯುತ್ತಾರೆ. ಹಾಗೆಯೇ ಮಳೆರಾಯ ಮತ್ತು ಉಳುವ ಬಸವಣ್ಣ ಕೂಡ ಮುಖ್ಯವಾಗಿರುವ ದೈವಗಳು. ದ್ರಾವಿಡ ಸಂಸ್ಕೃತಿಯ ಮೂಲದ ಸಂಬಂಧದಲ್ಲಿ ತಾಯಿಗೆ ಹೆಚ್ಚಿನ ಮನ್ನಣೆ ಇದ್ದುದರಿಂದ ಅದರ ಗುರುತಾಗಿ ನಮ್ಮಲ್ಲಿ ಹೆಣ್ಣು ದೇವರುಗಳೇ ಹೆಚ್ಚು. ಅವರ ಬಣ್ಣನೆಯೂ ಕೂಡ ಬಗೆಬಗೆಯಾಗಿ ಕಾಣಿಸಿಕೊಂಡಿದೆ.

**ಅತ್ತಗೆಯ ಅರಸೇನ ತಾಯಿ ಕುಮಾರೇನ**
**ಮಕ್ಕಳಿಗೆ ಮಾವ ನನಗಣ್ಣ / ಬಂದರ**
**ನಿಚ್ಚದೀವಳಿಗಿ ಮನೆಯಾಗ**

ಒಡಹುಟ್ಟು ಕುರಿತು ಹೆಣ್ಣು ತುಂಬಾ ಆತ್ಮೀಯವಾಗಿ ಹಾಡಿಕೊಂಡಿರುವ ಪದಗಳು ನಾಡಿನ ಎಲ್ಲಾ ಭಾಗಗಳಲ್ಲಿ ಕಾಣಬರುತ್ತವೆ. ಅಣ್ಣ, ತಮ್ಮ, ಅಕ್ಕ, ತಂಗಿಯರು ಒಂದಾಗಿ ಆಡಿ ಪಾಡಿ ಬೆಳೆದವರು. ಕಾಲಚಕ್ರ ಉರುಳಿದಂತೆ ಗಂಡುಮಕ್ಕಳು ಮಾತ್ರ ಹುಟ್ಟಿದ ಮನೆಯಲ್ಲಿ ಉಳಿದು, ಹೆಣ್ಣು ಮಕ್ಕಳು ಬೇರೆಯ ಮನೆಯನ್ನು ಸೇರುವ ಸಂದರ್ಭ ಬರುತ್ತದೆ. ಅಣ್ಣನ್ನು ಕುರಿತು ತಂಗಿಯು ಹಿಗ್ಗಿನಿಂದ ಹಾಡುತ್ತಾಳೆ.

**ಸೊಲ್ಲಾಪುರದಣ್ಣಗ ನಿಲ್ಲದಲೆ ಬರ ಹೇಳ**
**ಸೀರೆಯಲ್ಲಾ ಅವನ ಕುಬಸೊಲ್ಲ / ಅಣ್ಣನ**
**ಮಾರಿ ನೋಡಂಥ ಮನವಾಗಿ**

ಅಣ್ಣ ಬಂದ ದಿನವೇ ದೀಪಾವಳಿಯ ಹಬ್ಬ ಅವನನ್ನು ನೋಡುವುದೇ ಒಂದು ಹೆಮ್ಮೆ, ಸಂತೋಷ. ಅವನಿಂದ ಸಿಗುವ ಸೀರೆ ಕುಪ್ಪಸಗಳ ಪರವಾದ ಪ್ರೀತಿ ಎಂದು ಹಾಡಿದ್ದಾಳೆ.

**ತಾಯಿಲ್ದ ತವರೀಗ ಹೋಗದಿರು ನನಮನವ**
**ನೀರಿಲ್ದ ಕೆರೆಗೆ ಕರೆಬಂದು / ತಿರುಗಾಗ**
**ಆಗ ನೋಡದರ ದುಃಖಗಳ**

ಹೆಣ್ಣಿಗೆ ಪ್ರಿಯವಾದ ತವರೂರು, ತಾಯಿ ಇರುವಷ್ಟು ದಿವಸಗಳು ಮಾತ್ರ. ತಾಯಿ ಸತ್ತನಂತರ ತಾನು ಹುಟ್ಟಿದ ಮನೆ ಅಣ್ಣನ ಮನೆಯಾಗಿದೆ. ಅಲ್ಲಿ ಅವಮಾನಿತಳಾಗಿ ಬಂದ ದಾರಿಯನ್ನು ಹಿಡಿಯುತ್ತಾಳೆ. ಸಮಾಧಾನಮಾಡಲು ಬಂದ ಅಣ್ಣನಿಗೆ "ಮಡದಿಗಂಜೋನೆ ಸುಖಬಾಳೊ" ಎಂದು ಹರಸುತ್ತಾಳೆ! ಉಕ್ಕುಕ್ಕಿ ಬರುವ

ದು:ಖವನ್ನು ನುಂಗಿಕೊಳ್ಳುತ್ತಾಳೆ. ತವರಿಗೆಂದು ಹೋದವಳು ಅದೇ ದಿನ ಒಬ್ಬಳೇ ಕಾಂತಿಹೀನಳಾಗಿ ಹಿಂದಿರುಗಿದ ಬಗ್ಗೆ ಗಂಡ, ಅತ್ತೆ ಕಾರಣವನ್ನು ಕೇಳುತ್ತಾರೆ. ತನ್ನ ನೆಚ್ಚಿನ ತವರಿನಲ್ಲಿ ನಡೆದ ಕೆಟ್ಟ ಘಟನೆಗಳನ್ನು ನೇರವಾಗಿ ಹೇಳುವ ಮನಸ್ಸು ಬಾರದೇ, ಬೇರೊಂದು ರೀತಿಯಲ್ಲಿ ಸತ್ಯ ಸಂಗತಿಯನ್ನು ತೆರೆದಿಡುತ್ತಾಳೆ.

**ಹೋಗುತ ಹುಲಿಕಂಡೆ ಬರುತ ಸಾರಗ ಕಂಡೆ**
**ತೌರೂರ ದಾರೀಲಿ ಎಳ್ತಾವ / ಸರ್ಪನ ಕಂಡು**
**ಹಿಂದಿರುಗಿ ಬಂದೆ ಅತ್ತಮ್ಮ**

ಪರಿಸರದ ಮೋಸಕ್ಕೆ ಬಲಿಯಾಗಿ, ವ್ಯವಸ್ಥೆಯ ಕಣ್ಣಿಗೆ ಒಳ್ಳೆಯವಳಾಗುವಂತೆ ಮಾರ್ಪಾಟು ಹೊಂದಬೇಕಾದ ಅನಿವಾರ್ಯತೆಯನ್ನು ಪಡೆದು ಎಲ್ಲ ನೋವನ್ನು ತಾನೇ ಮೌನವಾಗಿ ಅನುಭವಿಸಬೇಕಾಗಿ ಬಂದ ಹೆಣ್ಣಿನ ದುರಂತ ಚಿತ್ರ ಇಲ್ಲಿದೆ. ಜಾನಪದದ ಗರ್ಭದಲ್ಲಿ ಅಡಗಿರುವುದೆಲ್ಲಾ ಉತ್ತಮವಾದುದ್ದೆಂಬ ಕುರುಡು ಮನೋಭಾವದ ಹಿನ್ನೆಲೆಯಲ್ಲಿ ಬರುವ ಈ ರೀತಿಯ ಬರವಣಿಗೆ ಜನತೆಯ ದೃಷ್ಟಿಯಿಂದ ತೀರಾ ಅಪಾಯಕಾರಿಯಾದುದಾಗಿದೆ. ಇಂಥ ಘಟನೆಗಳು ಇತಿಹಾಸದಲ್ಲಿ ನೋವು ಅನುಭವಿಸಿದವರನ್ನು ಗುರುತಿಸಲು ನೆರವಾಗುವ ತೀರಾ ಸಣ್ಣ ಸಣ್ಣ ಎಳೆಗಳು ಎಂಬುದನ್ನು ನಾವು ಮರೆಯಬಾರದು.

ಬೆಂಕಿಗೆ ಬಿದ್ದು, ಕೆರೆಗೆ ಮತ್ತು ಪ್ರವಾಹಗಳಿಗೆ ಬಲಿಯಾಗಿ ಸಾಯುತ್ತಿದ್ದ ಹೆಣ್ಣುಗಳಿಗೆ ತಾವು ತಮಗೇ ಅರಿವಿಲ್ಲದ ಅನ್ಯಾಯದ ಅನಂತ ಕೂಪಕ್ಕೆ ತಮ್ಮನ್ನು ಮುಗ್ಧವಾಗಿ ನೂಕಿ ಕೊಳ್ಳುತ್ತಿದ್ದೇವೆ ಎಂದು ಅನ್ನಿಸುತ್ತಿರಲಿಲ್ಲ. ವ್ಯವಸ್ಥೆಂತೂ ಈ ಬಗೆಯ ಬಲೆಗಳಿಗೆ ಬೀಳುವ ಮಿಕಗಳನ್ನು ಕಂಡು ಹಿಗ್ಗುತ್ತಿತ್ತು. ವ್ಯವಸ್ಥೆಯ ಭಯಂಕರ ಹಿಡಿತದಲ್ಲಿ ಸಿಕ್ಕಿ ಬುದ್ಧಿ ನಶಿಸಿಹೋದ ಮತ್ತೊಂದು ಹೆಣ್ಣು ವಿನಾಕಾರಣ ಕೆರೆಗೆ ಬಲಿಯಾಗಲು ಹೊರಟ ತನ್ನ ಗೆಳತಿಗೆ ಉಪದೇಶಿಸುವ ರೀತಿಯನ್ನು ಗಮನಿಸಿ:

**"ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತ"**

**"ಕೊಟ್ಟರೆ ಕೊಡಲೇಳು ಇಟ್ಟಾಂಗ ಇರಬೇಕು"**

ಗಂಡು ಮತ್ತೊಂದು ಹೆಣ್ಣನ್ನು ಬಯಸುವುದು ಯಾರಿಗೂ ಆಶ್ಚರ್ಯಕರವಾಗಿ ಕಾಣಿಸುವುದಿಲ್ಲ. ಇಂಥ ಗಂಡು ಹೆಣ್ಣಿಗೆ ಪರದೇವವಾಗಿರಬೇಕೆಂದು ಮತ್ತು ಸದಾಕಾಲವೂ ಹೆಣ್ಣು ಪತಿವ್ರತೆಯಾಗಿರಬೇಕೆಂದು ಇಡೀ ಗಂಡುಕುಲ ಮತ್ತು ಸಮಾಜ ಬಯಸುತ್ತದೆ. ತಾನು ಸತ್ತ ಕ್ಷಣದಲ್ಲೇ ತನೊಂದಿಗೆ ಬೆಂಕಿಗೆ ಬೀಳಬೇಕೆಂದು ಇವನ ಬಯಕೆ.

**ಪರಿಮಳದರಸರು ಪರನಾರಿಗೋದರ**
**ಮನಿಮಡದಿ ಬಾಯ ಬಿಡಬ್ಯಾಡ-ತಾವ್ವಮ್ಮ**

**ಮನ ಹೇಸಿ ಮನಿಗೆ ಬರತಾರ**

ಇದನ್ನೆಲ್ಲಾ ನೋಡಿದ ಹೆಣ್ಣು ಬೇರೆದಾರಿ ಕಾಣದೆ ತನ್ನನ್ನು ತಾನೇ ಶಪಿಸಿಕೊಂಡಿದ್ದಾಳೆ. ಮಗಳನ್ನು ಕೆಟ್ಟ ಗಂಡಿಗೆ ಕೊಟ್ಟು ಮದುವೆ ಮಾಡಿದ ತಪ್ಪಿಗೆ ತಾಯಿಯ ಹೃದಯವು ಆಳವಾಗಿ ಮರುಗಿದೆ:

**ಹೆಣ್ಣು ಆಗೂದಕಿಂತ ಮಣ್ಣು ಆಗೂದು ಲೇಸು**
**ಮಣ್ಣಿನ ಮ್ಯಾಲೆ ಮರವಾಗಿ- ಬೆಳೆದಾರ**
**ಬಂದವರಿಗೆಲ್ಲ ನೆರಳವ್ವ**
**ಮಲ್ಲಿಗಿಯಂಥಾ ಮಗಳೀಗೆ ಎಲ್ಲಿತ್ತೊ ಒಗೆತನ?**
**ಹುಲ್ಲಾಗ ಬೆಂಕಿ ಹೊಗೆದಂಗ – ಗುಡ್ಡಾದ**
**ಕಲ್ಲೀಗಿ ಧಾರೆ ಎರೆದಂಗ**

ಈ ನಾಡ ಹೆಣ್ಣು ಮಕ್ಕಳು ಹೆಣ್ಣಿನ ಭಾವನೆಗಳನ್ನು ಆಡುನುಡಿಯಲ್ಲಿ ಹಿಡಿದಿಟ್ಟರು. ಗಂಡು ಮತ್ತು ಸಮಾಜದ ಮೇಲುವರ್ಗ ನಿರ್ಮಿಸಿದ ಬಿಗಿಹಿಡಿತದ ಎಲ್ಲಾ ಬಂಧನಗಳನ್ನೂ ಮೀರಿ ನಿಂತು, ತಮ್ಮ ಅನುಭವದ ಒಳಹೊರ ಮಗ್ಗುಲುಗಳನ್ನು ಆಗಾಗ ಕೆದಕಿ ನೋಡಿದ ಹೆಚ್ಚುಗಾರಿಕೆಯೂ ಇವರಲ್ಲಿ ಇದೆ. ಈ ದೃಷ್ಟಿಯಿಂದ ಹೊಸ ಸಂಸ್ಕೃತಿಯ ನಿರ್ಮಾಣಕ್ಕೆ ಪೂರಕವಾಗುವ ಅನೇಕ ಮಹತ್ವದ ಅಂಶಗಳು ಅಕ್ಷರಬಾರದ ಈ ಸ್ತ್ರೀಯರ ಸಾಹಿತ್ಯದಲ್ಲಿ ಇವೆ ಎಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು.

ಜನಪದ ಸಮಾಜ ಪ್ರಧಾನವಾಗಿ ಗ್ರಾಮೀಣ ಸಮಾಜವಾಗಿದೆ. ಪಟ್ಟಣಗಳ ನಾಗರಿಕ ಸಮಾಜದಿಂದ ಭಿನ್ನವಾಗಿದೆ. ಜನಪದರು ಎಂದರೆ ಬಹುಪಾಲು ಅನಕ್ಷರಸ್ಥರೇ ಆಗಿದ್ದಾರೆ. ಅಕ್ಷರಸ್ಥ ಆಧುನಿಕ ಸಮಾಜದಿಂದ ಇವರು ಭಿನ್ನವಾಗಿ ಕಾಣುತ್ತಾರೆ. ಜನಪದ ಕಲೆ ಕಾಲಾತೀತವಾದ ಕಲೆಯಾಗಿದೆ. ಪದಗಳ ಮೂಲಕ ಮಾನವನ ಸಂವೇದನೆ ಹಾಗೂ ಭಾವನೆಗಳನ್ನು ತನ್ನದೆ ಆದ ಶೈಲಿಯಲ್ಲಿ ವ್ಯಕ್ತಪಡಿಸುತ್ತದೆ.

ದೃಶ್ಯ ಮಾಧ್ಯಮದಿಂದ ಜನಪದ ಕಲೆ ನಾಶವಾಗುವ ಸ್ಥಿತಿ ತಲುಪಿದೆ. ಯುವಜನರು ಜನಪದ ಕಲೆ ಉಳಿಸಿ ಬೆಳೆಸಲು ಮುಂದಾಗಬೇಕಿದೆ. ಮುಂದಿನ ಪೀಳಿಗೆಗೆ ಮೌಲ್ಯಗಳನ್ನು ತಿಳಿಸಿಕೊಡುವ ಕಾರ್ಯವನ್ನು ಜನಪದ ಪರಿಷತ್ ಮಾಡಬೇಕು. ಹಳ್ಳಿಯ ಹಾಡುಗಳು, ಸಂಪ್ರದಾಯದ ಪದಗಳು, ಕೃಷಿ ಗೀತೆಗಳು, ಗ್ರಾಮೀಣ ಗೀತೆಗಳ ಬಳಕೆ ಕಡಿಮೆಯಾಗಿ ಅಳಿವಿನ ಅಂಚಿನಲ್ಲಿವೆ. ಜಾಗತೀಕರಣ ಬೆಳೆದು ಜನಪದಕ್ಕೆ ಧಕ್ಕೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಆಗಿದೆ. ಗ್ರಾಮೀಣರ ಮಧ್ಯ ಜನಪದ, ಗೀಗಿ ಪದ, ಡೊಳ್ಳಿನ ಪದ, ಭಜನಾ ಪದ, ರಾಶಿ ಪದ, ಸೋಬಾನೆ ಪದಗಳನ್ನು ನಿತ್ಯದ ಕಾಯಕದೊಂದಿಗೆ ಹಾಡುತ್ತಿದ್ದರು ಆದರೆ ಇಂದು

ಆಧುನಿಕ ತಂತ್ರಜ್ಞಾನ ಬೆಳೆದಂತ್ತೆಲ್ಲಾ ಇತ್ತೀಚೆಗೆ ದೇಸಿ ಸೊಗಡಿನ ಜನಪದ ಮರೆಮಾಚುತ್ತಿದ್ದು, ಅದು ಉಳಿಬೇಕು ಬೆಳೆಯಬೇಕು ಮುಂದಿನ ಪೀಳಿಗೆಗೂ ಕೊಡುಗೆ ನೀಡಬೇಕು.

## ಪರಾಮರ್ಶನ ಗ್ರಂಥಗಳು:


1. ಜಿ.ಶಂ.ಪರಮಶಿವಯ್ಯ, (2015), ಜಾನಪದ ಸಾಹಿತ್ಯ ಸಮೀಕ್ಷೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಡಾ. ಬಿ.ಎಸ್.ಭಜಂತ್ರಿ (ಸಂ), (2021), ಜನಪದ ಸಾಹಿತ್ಯ ಮತ್ತು ಜನಪದ ಗಣಿತ, ಪ್ರಸಾರಾಂಗ, ಕ.ವಿ.ವಿ., ಧಾರವಾಡ.
3. ಪ್ರೊ. ನಲ್ಲೂರ ಪ್ರಸಾದ (ಸಂ), (1992), ನವೋದಯ ಸಾಹಿತ್ಯ ಮತ್ತು ಜನಪದ, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರ.
4. ಡಾ. ವಿಠ್ಠಲ್ ಮಾಲಿ, (1980), ಜನಪದ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
5. ಶಿವರಾಮ ಕಾರಂತ, (1985), ಜನಪದ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾಲಯ ಪ್ರಕಾಶನ, ಮೈಸೂರು.
6. ನಾಗಭೂಷಣ ಬಗ್ಗನಡು (ಸಂ), (2014), ಆಧುನಿಕ ಜನಪದ, ಶ್ರೀ ಅನ್ನಪೂರ್ಣ ಪ್ರಕಾಶಕರು, ಬೆಂಗಳೂರು.
7. ಹಂಪನಾ, (2002), ಜನಪದ ಸಾಹಿತ್ಯ ಪರಿಚಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
8. ಎಂ. ಚಿದಾನಂದಮೂರ್ತಿ, (1978), ಜನಪದ ಮತ್ತು ಪುರಾಣ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.